ನಮ್ಮ ಬ್ಲಾಕಿನ ಬಳಿ ಬಂದೆವು. "ಹೇಗನ್ನಿಸಿತು ವಸೂ..." ಎಂದೆ. "ಓ ನೈಸ್... ಈ ಅಪಾರ್ಟ್‌ಮೆಂಟಿನಲ್ಲಿ ನಾಲ್ಕು ಅಂತಸ್ತುಗಳು, ಹದಿನೈದು ಬ್ಲಾಕುಗಳು, ಮುನ್ನೂರ ಅರವತ್ತು ಫ್ಲ್ಯಾಟುಗಳು ಇವೆ. ಸದ್ಯಕ್ಕೆ ಇನ್ನೂರ ಹತ್ತು ಕಾರುಗಳು ಮೂವತ್ತು ಬೈಕುಗಳು ಬೇಸ್‌ಮೆಂಟಿನ ಪಾರ್ಕಿಂಗ್ ಲಾಟಿನಲ್ಲಿವೆ..." ಎಂದವಳನ್ನು ನೋಡಿ ನಾನು ಒಂದು ಕ್ಷಣ ತಬ್ಬಿಬ್ಬಾಗಿ ಹೋದೆ. "ವಸೂ ಯೂ ಆರ್ ಸೋ ಇಂಟೆಲಿಜೆಂಟ್!" ಎಂದು ನನಗರಿವಿಲ್ಲದಂತೆ ಅಭಿನಂದನೆ ಸಲ್ಲಿಸಿದೆ. "ಥ್ಯಾಂಕ್ಯೂ ಡಾರ್ಲಿಂಗ್..." ಎಂದು ಮಂದಹಾಸ ಬೀರಿದಳು. ಪ್ರೊಫೆಸರರ ಶ್ರಮ ಸಾರ್ಥಕವಾಯಿತು ಎನಿಸಿತು.

ಲಿಫ್ಟ್ ಏರಿ ನಮ್ಮ ಫ್ಲ್ಯಾಟಿನ ಒಳಗೆ ಕಾಲಿಟ್ಟೆವು. ಹುಡುಗಿ ನಿಂತಲ್ಲಿಯೇ ಒಮ್ಮೆ ಫ್ಲ್ಯಾಟಿನ ಒಳಗೆ ದೃಷ್ಟಿ ಹರಿಸಿದಳು. "ಗುಡ್ ಎರಡು ಬೆಡ್ ರೂಮಿನ ಫ್ಲ್ಯಾಟ್, ಒಂದು ಕಿಚನ್, ಎರಡು ಬಾತ್ ರೂಮುಗಳು... ಚೆನ್ನಾಗಿದೆ..." ಎಂದಳು. ನಾನು ಅವಾಕ್ಕಾಗಿ ಹೋದೆ. ಇದ್ಯಾವ ದಿವ್ಯದೃಷ್ಟಿ? ಪ್ರೊಫೆಸರರು ನೋಡಿದ ತಕ್ಷಣ ಎಲ್ಲವನ್ನೂ ಗ್ರಹಿಸಿ ಸಂಗ್ರಹಿಸುವ ಶಕ್ತಿಯನ್ನು ಈ ಯಂತ್ರಕ್ಕೆ ನೀಡಿದ್ದಾರೆಯೇ? ಒಮ್ಮೆ ನೋಡಿದ್ದನ್ನು ಮರೆಯಲಾರದೇ? ವೀಕ್ಷಿಸಿದ ಯಾವುದೇ ಕೆಲಸವನ್ನು ಪುನರಾವರ್ತಿಸಬಲ್ಲುದೇ? ಇದೆಲ್ಲವನ್ನೂ ಪರೀಕ್ಷಿಸುವ ಕೆಲಸ ನನ್ನದಿರಬಹುದು. ಆದರೆ ಈ ಯಂತ್ರದ ಸಾಮೀಪ್ಯದಲ್ಲಿ ನನಗೆ ಅದೊಂದು ಯಂತ್ರವೆಂದು ನಂಬಲು ಸಾಧ್ಯವಾಗುತ್ತಲೇ ಇಲ್ಲ!

"ವಸೂ... ಬಾ ಇಲ್ಲೀ..." ಎಂದು ಆಕೆಯನ್ನು ಬೆಡ್‌ರೂಮಿಗೆ ಕರೆದುಕೊಂಡು ಹೋಗಿ ನಿಲುವುಗನ್ನಡಿಯ ಮುಂದೆ ನಿಲ್ಲಿಸಿ ಕೇಳಿದೆ, "ನಮ್ಮಿಬ್ಬರ ನಡುವೆ ಇರುವ ವ್ಯತ್ಯಾಸವೇನು?"

"ನಿಮ್ಮದು ಗಂಡಿನ ರೂಪ... ನನ್ನದು ಹೆಣ್ಣಿನ ರೂಪ" ಪ್ರತಿಯಾಗಿ ಮುಗುಳ್ನಕ್ಕು ಹೇಳಿದಳು.

"ವಾರೆವ್ಹಾ! ಗ್ರೇಟ್... ಗ್ರೇಟ್..." ನಾನು ಇನ್ನಿಲ್ಲದ ಉತ್ಸಾಹದಿಂದ ಉದ್ಗರಿಸಿದೆ.

"ಡ್ಯಾಡ್ ನನಗೆ ಅವರ ಲ್ಯಾಪ್‌ಟಾಪಿನಲ್ಲಿ ಎಲ್ಲವನ್ನೂ ತೋರಿಸಿದ್ದಾರೆ. ಗಂಡಿನ ರೂಪ, ಹೆಣ್ಣಿನ ರೂಪ, ಅವರಿಬ್ಬರೂ ಉಪಯೋಗಿಸುವ ವೇಷಭೂಷಣಗಳು, ಆಲಂಕಾರಿಕ ವಸ್ತುಗಳು, ತಿನ್ನುವ ಆಹಾರಗಳು, ಅವುಗಳನ್ನು ತಯಾರಿಸಲು ಅಡುಗೆ ಮಾಡುವುದು, ಮನೆಯನ್ನು ಸ್ವಚ್ಛಗೊಳಿಸುವುದು, ಉಪಯೋಗಿಸುವ ಸಾಧನಗಳು, ವಾಹನಗಳು, ಅವು ಕಾರ್ಯನಿರ್ವಹಿಸುವ ರೀತಿ, ಮನರಂಜನೆಗಾಗಿ ಬಳಸುವ ವಿವಿಧ ಪರಿಕರಗಳು, ಸೂರ್ಯ, ಚಂದ್ರ, ಭೂಮಿ, ಹಗಲುರಾತ್ರಿ ಎಲ್ಲವನ್ನೂ ನೋಡಿದ್ದೇನೆ. ಮಗುವಿನ ಜನನ, ಅದರ ಲಾಲನೆಪಾಲನೆ, ಬೆಳವಣಿಗೆಯ ಹಂತಗಳ ವಿಡಿಯೊಗಳನ್ನು ನೋಡಿದ್ದೇನೆ. ನಾನು ನೋಡಿರುವ ಯಾವ ಕೆಲಸವನ್ನಾದರೂ ನಾನು ಪುನಾರಾವರ್ತಿಸಬಲ್ಲೆ..." ಎಂದು ಶಾಂತಚಿತ್ತದಿಂದ ವಿವರಿಸಿದ್ದು ನೋಡಿ ನನಗೆ ಗರ ಬಡಿದಂತಾಯಿತು.

ಪ್ರೊಫೆಸರರು ಈ ಯಂತ್ರಕ್ಕೆ ಕಲಿಸಬೇಕಾಗಿರುವ ಯಾವ ಕೆಲಸವನ್ನೂ ಉಳಿಸಿಲ್ಲ! ನಾನು ಕೇವಲ ಪ್ರಾಯೋಗಿಕವಾಗಿ ಎಲ್ಲವನ್ನೂ ಪರೀಕ್ಷಿಸಬೇಕು ಅಷ್ಟೇ!

ಮೊದಲನೆಯ ಪರೀಕ್ಷೆಯೆಂದು "ಕಿಸ್ ಕೊಡುವುದು ಗೊತ್ತಾ..." ಎಂದು ಮಂದಹಾಸ ಬೀರಿದೆ. "ಓ... ಗೊತ್ತು" ಎಂದವಳೇ ಎರಡೂ ಕೈಗಳಿಂದ ನನ್ನನ್ನು ತಬ್ಬಿಕೊಂಡು ನನ್ನ ತುಟಿಗೆ ತುಟಿ ಹಚ್ಚಿದಳು. ನನಗೆ ತೀವ್ರ ಆಘಾತದ ನಡುವೆಯೂ ಅನಿರ್ವಚನೀಯ ರೋಮಾಂಚನವಾಗಿ ನಾನೂ ಪ್ರತಿಸ್ಪಂದಿಸಿದೆ!

ನಾನು ಪಡೆದ ಮೊದಲ ಮುತ್ತು ನನ್ನ ಯೋಚನಾಲಹರಿಯನ್ನು ಬದಲಾಯಿಸಿತು. ವಸುಂಧರೆ ಯಂತ್ರವಲ್ಲ! ಅವಳೊಬ್ಬಳು ಮಾನವರನ್ನು ಮೀರಿದ ಅದ್ಭುತ ಸಂಗಾತಿಯಾಗಬಲ್ಲಳು ಎನಿಸಿತು. ನಾನು ಇದನ್ನು ಪ್ರಾಯೋಗಿಕವಾಗಿ ದೃಢಪಡಿಸಿ ಪ್ರೊಫೆಸರರ ಸಂಶೋಧನೆಯನ್ನು ಜಗಜ್ಜಾಹೀರುಗೊಳಿಸಿ ಅವರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವಂತೆ ಮಾಡಬೇಕೆಂದು ಪಣ ತೊಟ್ಟೆ.